ಮಕ್ಕಳು ಆಟವಾಡುವ ಸಂದರ್ಭದಲ್ಲಿ ದಿನಾಂಕ ೪-೩-೯೨ರಂದು ಆಕಸ್ಮಿಕವಾಗಿ ಇಬ್ಬರು ಮಕ್ಕಳು ಬಂಡೆಯ ಹಳ್ಳಕ್ಕೆ ಬಿದ್ದಿರುತ್ತಾರೆ. ಇದನ್ನು ನೋಡಿದ ಸುತ್ತಮುತ್ತಲ ಜನರು ರಕ್ಷಿಸಿರುತ್ತಾರೆ. ಈ ಹಳ್ಳದ ದಕ್ಷಿಣ ಭಾಗದ ಕಡೆಗೆ ಬಹಳ ಕಿರಿದಾದ ರಸ್ತೆ ಇದ್ದು (೧೨ ಅಡಿ - ೧೪ ಅಡಿ) ಈ ರಸ್ತೆಯನ್ನು ದ್ವಿಚಕ್ರ ವಾಹನಗಳ ಸವಾರರು, ಸೈಕಲ್ ಸವಾರರು ಹಾಗೂ ಜಡಪರ ಸಂಘದಲ್ಲಿ ಕಟ್ಟುತ್ತಿರುವ ಮನೆಗಳಿಗೆ ಮರಳು ಮತ್ತು ಇಟ್ಟಿಗೆಗಳನ್ನು ಸಾಗಿಸಲು ಎತ್ತಿನ ಗಾಡಿಗಳವರು ಉಪಯೋಗಿಸುತಿದ್ದಾರೆ. ಈ ರಸ್ತೆಯ ಅಂಚಿಗೆ ಹೊಂದಿಕೊಂಡಿರುವ ಈ ಹಳ್ಳವು ಸುಮಾರು ೧೦೦ ಅಡಿಯಷ್ಟು ಆಳವಿದ್ದು ಬಹಳ ಕಡಿದಾಗಿರುತ್ತದೆ. ವಾಹನ ಚಾಲನೆ ಮತ್ತು ಜನರ ಓಡಾಟವನ್ನು ಈ ಭಾಗದಲ್ಲಿ ತಡೆಯಲು ಬಹಳ ಪ್ರಯತ್ನ ಪಟ್ಟರೂ ಈ ಭಾಗದ ಜನರು ಈ ರಸ್ತೆಗೆ ಹಾಕಿದ್ದ ಗಾರ್ಡ್ ಸ್ಟೋನ್‌ಗಳನ್ನು ಒಡೆದು ಹಾಕಿ ಪುನಃ ಉಪಯೋಗಿಸುತ್ತಾರೆ. ಈ ಎಲ್ಲಾ ಅನಾನುಕೂಲತೆಗಳನ್ನು ಪರಿಶೀಲಿಸಿ ಮಾನ್ಯ ಶಾಸಕರಾದ ಶ್ರೀ ರಾಮಲಿಂಗಾರೆಡ್ಡಿಯವರ ಕೋರಿಕೆಯಂತೆ ಮತ್ತು ವಿಭಾಗದ ನಗರ ಸಭಾ ಸದಸ್ಯರ ಕೋರಿಕೆಯಂತೆ ರಸ್ತೆಯ ಮಧ್ಯೆ ಭಾಗದಲ್ಲಿ ಸೈಜು ಕಲ್ಲುಗಳ ತಡೆಗೋಡೆಯನ್ನು ನಿರ್ಮಿಸಲು ಈಗಾಗಲೇ ೧೭೮೦೦೦ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಿರಿದಾದ ರಸ್ತೆಗೆ ಹೊಂದುಕೊಂಡಂತೆ ೩ ಮನೆಗಳಿದ್ದು ಅವರಿಗೆ ಈಗಾಗಲೇ ಎಚ್ಚರಿಕೆಯನ್ನು ನೀಡಲಾಗಿದೆ. ಮುರಿದು ಬಿದ್ದಿರುವ ಕಲ್ಲುಗಳ ಜಾಗದಲ್ಲಿ ತಾತ್ಕಾಲಿಕವಾಗಿ ಕಲ್ಲುಗಳನ್ನು ನಿಲ್ಲಿಸಲಾಗಿದೆ ಮತ್ತು ಈ ರಸ್ತೆಯನ್ನು ಸದಾ ಓಡಾಟಕ್ಕೆ ಉಪಯೋಗಿಸದಂತೆ ಗಾರ್ಡ್-ಸ್ಟೋನ್‌ಗಳನ್ನು ಸಹ ನಿಲ್ಲಿಸಿ ರಸ್ತೆಯನ್ನು ಬಂದ್ ಮಾಡಲಾಗಿದ್ದು ಜನರು ಮಾತ್ರ ಓಡಾಡಲು ಜಾಗವನ್ನು ಬಿಡಲಾಗಿದೆ. ಈ ತಡೆಗೋಡೆಯನ್ನು ನಿರ್ಮಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು.

ನಾಗರ ಹೊಳೆ ಬೆಂಕಿ ದುರಂತಕ್ಕೆ ಕಾರಣರಾದರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದ ಬಗ್ಗೆ

ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):- ಮಾನ್ಯ ಅಧ್ಯಕ್ಷಣೆಯವರೇ, ನಾಗರಹೊಳೆಯ ಬೆಂಕಿ ದುರಂತದಿಂದ ನಾಡಿನ ನಾಗರೀಕರೆಲ್ಲಾ ನಾಚುವಂತಾಗಿದೆ. ಇದರ ಹಿನ್ನೆಲೆಯಲ್ಲಿ ಕಾಳಸಂತೆಕೋರರು, ಮರಗಳ್ಳರು, ಅಕ್ರಮ ಸಾಗಾಣೆದಾರರು, ಜೂಜುಕೋರರು ಇದ್ದು ಅವರ ಚಟುವಟಿಕೆಗಳನ್ನು ನಿಯಂತ್ರಿಸದಿದ್ದಲ್ಲಿ, ಗಂಧ ತೇಗದ ಮರಗಳ ತೋಪುಗಳ ಹಾಗೂ ಆಹಾರಧಾನ್ಯಗಳ ಅಕ್ರಮ ಸಾಗಾಣೆ ಹಾಗೂ ಮರಗಳ್ಳತನ ಜಾಸ್ತಿ ಆಗಿ ಈ ಸಮಾಜ ಘಾತಕರು ತಮ್ಮ ಶಕ್ತಿ ವರ್ಧಿಸಿಕೊಂಡು ನಾಗರಹೊಳೆ ಮಾತ್ರವಲ್ಲ ನಾಡಿಗೇ ಕಿಚ್ಚು ಹಚ್ಚುವ ದಿನ ದೂರವಿಲ್ಲ. ಇದಕ್ಕಾಗಿ ವಿಶೇಷ ಪೋಲೀಸ್ ಮತ್ತು ಅರಣ್ಯ ಇಲಾಖಾ ಪಡೆಯನ್ನು ನೇಮಿಸಬೇಕು. ಕೆಟ್ಟ ಪರಿಸರದಲ್ಲಿ ದಟ್ಟವಾಗಿ ನಡೆಯುವ ಈ ಚಟುವಟಿಕೆಗಳನ್ನು ಮಟ್ಟ ಹಾಕಲು ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯೆಯರು ಎತ್ತಿರತಕ್ಕಂಥ ವಿಚಾರವನ್ನು ಮಾನ್ಯ ಅರಣ್ಯ ಮಂತ್ರಿಗಳ ಗಮನಕ್ಕೆ ತಂದು ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಮಳವಳ್ಳಿ ತಾಲ್ಲೂಕಿನ ಬೊಪ್ಪೇಗೌಡನಪುರ ಹೋಬಳಿಯ ಸಮೀಪದ ಬಿ. ಜಿ. ಪುರ

ಕಾಲುವೆಯ ಬಗ್ಗೆ

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):- ಮಾನ್ಯ ಅಧ್ಯಕ್ಷರೇ, ಮಳವಳ್ಳಿ ತಾಲೂಕು ಬೊಪ್ಪೇಗೌಡನಪುರ ಹೋಬಳಿಯು ಸಂಪೂರ್ಣವಾಗಿ ಖುಷ್ಕಿ ಭೂಮಿಯನ್ನು ಹೊಂದಿದೆ. ಮಳೆಯ ಆಧಾರದ ಮೇಲೆ ಜನರ ಜೀವನ ಸಾಗಬೇಕಾಗಿದೆ. ಆದ್ದರಿಂದ ತುರಗನೂರು ಬ್ಯಾಂಚಿನಿಂದ ಈಗಾಗಲೇ ಕಲ್ಯಾಣಿ ಕೊಪ್ಪಲುವರೆಗೆ ಕಾಲುವೆಯಾಗಿರುತ್ತದೆ. ಬಿ. ಜಿ. ಪುರದ ಈ ಕಾಲುವೆಯನ್ನು ೧೬ ಕಿಲೋಮೀಟರ್‌ವರೆಗೆ ಮುಂದುವರಿಸುವುದರಿಂದ ೧೫೦೦೦ ಎಕರೆ ಭೂಮಿಗೆ ನೀರುಣಿಸಿದಂತೆ ಆಗುತ್ತದೆ. ಸಾವಿರಾರು ರೈತರಿಗೆ, ರೈತಕಾರ್ಮಿಕರಿಗೆ ಜೀವನಕ್ಕೆ ಮಾರ್ಗವಾಗುತ್ತದೆ. ಹಾಗೂ ಜನ ಜಾನುವಾರುಗಳಿಗೆ ಕೆರೆಗಳಿಗೆ ನೀರು ಒದಗಿಸಿದಂತೆ ಆಗುತ್ತದೆ. ಇದೊಂದು ಶಾಶ್ವತವಾದ ಪರಿಹಾರ ಕೂಡ. ಉನ್ನತಾಧಿಕಾರಿಗಳ ತಜ್ಞರ ಸಮಿತಿ ಕೂಡ ಈ ಬಿ. ಜಿ. ಪುರದ ಕಾಲುವೆಯನ್ನು ಮುಂದುವರಿಸಲು ಶಿಫಾರಸ್ಸು ಮಾಡಿರುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸದರಿ ವಿಚಾರವಾಗಿ ಸರಕಾರ ಏನು ಕ್ರಮ ಕೈಗೊಂಡಿದೆ? ಬೊಪ್ಪೇಗೌಡನ ಪುರದವರೆಗೆ ಬಿ. ಜಿ. ಪುರ ಕಾಲುವೆಯನ್ನು ಅತೀ ಜರೂರಾಗಿ ಮುಂದುವರಿಸುವಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಜರೂರು ಹಾಗೂ ನಿರ್ದಿಷ್ಟವಾದ ಆದೇಶವನ್ನು ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು ನೀಡಬೇಕೆಂದು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

೧) ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ಬೊಪ್ಪೇಗೌಡನಪುರ (ಬಿ. ಜಿ. ಪುರ) ನಾಲೆಯು ೧೬ ಮೈಲಿ ಉದ್ದವಿದ್ದು, ವಿಶ್ವೇಶ್ವರಯ್ಯ ನಾಲೆಯ ತುರಗನೂರು ಶಾಖೆಯ ತುದಿ ಹಂತದ ಉಪಕಾಲುವೆಯಾಗಿರುತ್ತದೆ. ಈ ನಾಲೆಯಿಂದ ಬಿ. ಜಿ. ಪುರ ಹೋಬಳಿಯ ಕೆಲವು ಭಾಗದ ಜಮೀನುಗಳಿಗೆ ಖುಷ್ಕಿ ವ್ಯವಸಾಯಕ್ಕಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ, ಈ ನಾಲೆಯಿಂದ ಬಿ. ಜಿ. ಪುರ ಹೋಬಳಿಯಲ್ಲಿರುವ ಕೆರೆಗಳಿಗೂ ಸಹ ನೀರು ಸರಬರಾಜು ಮಾಡಲಾಗುತ್ತಿದೆ.

೨) ಬಿ. ಜಿ. ಪುರ ಹೋಬಳಿಯು ಸಂಪೂರ್ಣವಾಗಿ ಖುಷ್ಕಿ ಭೂಮಿಯನ್ನು ಹೊಂದಿದ್ದು, ಮಳೆಯ ಆಧಾರದ ಮೇಲೆ ರೈತರು ಸಾಗುವಳಿ ಮಾಡುತ್ತಿದ್ದಾರೆ. ಹಾಲಿ ಇರುವ ಬಿ. ಜಿ. ಪುರ ನಾಲೆಯನ್ನು ಮುಂದುವರಿಸಿ ಇನ್ನೂ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಮನವಿಗಳು ಬಂದಿರುತ್ತವೆ.

೩) ಈ ಕಾಲುವೆಯನ್ನು ಇನ್ನೂ ಸುಮಾರು ೧೫ ಕಿ. ಮೀ. ವರೆಗೆ ಮುಂದುವರಿಸುವುದರಿಂದ ಸುಮಾರು ೧೦೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ. ಈ ಕಾಮಗಾರಿಯನ್ನು ಕೃಷ್ಣರಾಜಸಾಗರ ಆಧುನೀಕರಣ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವ ಪ್ರಸ್ತಾವ ಇದ್ದು ಸರ್ವ ಕಾರ್ಯಗಳು ಪೂರ್ಣಗೊಳ್ಳುತ್ತಿವೆ ಮತ್ತು ಅಂದಾಜನ್ನು ತಯಾರು ಮಾಡಲಾಗುತ್ತಿದೆ.

೪) ಆಧುನೀಕರಣ ಆಡಿಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಸಾಮರ್ಥ್ಯವನ್ನು ಈಗ ಇರುವ ೨೩೮೩ ಕ್ಯೂಸೆಕ್ಸ್‌ನಿಂದ ೩೦೫೦ ಕ್ಯೂಸೆಕ್ಸ್‌ಗೆ ಹೆಚ್ಚಿಸಲಾಗುವ ಕಾರ್ಯಗಳು ಮುಗಿದು ಹೆಚ್ಚಿನ ಪ್ರಮಾಣದ ನೀರನ್ನು ವಿಶ್ವೇಶ್ವರಯ್ಯ ನಾಲೆಯಲ್ಲಿ ಬಿಟ್ಟ ನಂತರ ಮುಂದುವರಿಸಿದ ಬಿ. ಜಿ. ಪುರದ ನಾಲೆಯಲ್ಲಿ ನೀರನ್ನು ಬಿಡಬಹುದಾಗಿದೆ.

೫) ಈ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸದರಿ ಕೆಲಸವು ೧೯೯೪-೯೫ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಯಲ್ಲಿ ೧೯೮೭ರಿಂದಲೂ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೆಸರ್ (ಆರ್ಥೋಪೆಡಿಕ್) ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ.

ಶ್ರೀ ಬಾಬೂರಾವ್ ಚವಾಣ್ (ಶಹಬಾದ್):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸಂಜಯಗಾಂಧಿ ಆಪಘಾತ ಆಸ್ಪತ್ರೆಯಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೇಸರ್ ಆರ್ಥೋಪಿಡಿಕ್ ಬ್ಯಾಕ್‌ಲಾಗ್ ಹುದ್ದೆಯನ್ನು ೧೯೮೭ ರಿಂದಲೂ ಖಾಲಿ ಇಟ್ಟಿರುವುದಕ್ಕೆ ಕಾರಣವೇನು? ಈ ಹುದ್ದೆಯನ್ನು ಭರ್ತಿ ಮಾಡುವುದಾಗಿ ೧೯೮೭ ರಲ್ಲಿ ವಿಧಾನ ಪರಿಷತ್ತಿನ ೬೦ನೇ ಅಧಿವೇಶನದಲ್ಲಿ ಆರೋಗ್ಯ ಸಚಿವರು ಭರವಸೆ ನೀಡಿದ್ದರು. ಮತ್ತು ಜಿ. ಓ. ನಂಬರ್ ೧೯ ಎಸ್‌ಬಿಸಿ ೮೯ ದಿನಾಂಕ ೧೨-೭-೮೯ ರ ಪ್ರಕಾರ ಬ್ಯಾಕ್‌ಲಾಗ್ ವೇಕೆನ್ಸಿ ಭರ್ತಿ ಮಾಡಲು ಆರ್ಡರ್ ಇರುವಾಗಲೂ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಜಾರಿ ಮಾಡುತ್ತಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಬುರಾವ್ ಚವಾಣ್ ಅವರು ಕೇಳಿರತಕ್ಕ ಪ್ರಶ್ನೆಗಳಿಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ:-

ಸಂಜಯಗಾಂಧಿ ಆಪಘಾತ ಪುನರ್ವಸತಿ ಮತ್ತು ಶಾರೀರಕ ಔಷಧಿ ಸಂಸ್ಥೆ ಬೆಂಗಳೂರು, ಇಲ್ಲಿ ಈ ಕೆಳಕಂಡ ಪ್ರಾಧ್ಯಾಪಕರ ಹುದ್ದೆಗಳಿವೆ.

೧) ಸಹಾಯಕ ಪ್ರಾಧ್ಯಾಪಕರು - ಆರ್ಥೋಪೆಡಿಕ್ಸ್ ೨

೨) ಸಹಾಯಕ ಪ್ರಾಧ್ಯಾಪಕರು - ಪ್ಲಾಸ್ಟಿಕ್ ಸರ್ಜರಿ ೧

೩) ಸಹಾಯಕ ಪ್ರಾಧ್ಯಾಪಕರು - ಜನರಲ್ ಸರ್ಜರಿ ೧

೪) ಸಹಾಯಕ ಪ್ರಾಧ್ಯಾಪಕರು - ನ್ಯೂರೋ ಸರ್ಜರಿ ೧

೫) ಸಹಾಯಕ ಪ್ರಾಧ್ಯಾಪಕರು - ಅನೆಸ್ತೇಸಿಯಾ ೧

ಒಟ್ಟು ೬

ಮೇಲ್ಕಂಡ ಹುದ್ದೆಗಳ ಪೈಕಿ, ನ್ಯೂರೋ ಸರ್ಜರಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಮತ್ತು ಆರ್ಥೋಪೆಡಿಕ್ಸ್ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವ ಇಬ್ಬರ ಪೈಕಿ ಒಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಈ ಎರಡು